ಮನವೊಲಿಕೆಯ ಸಾಲುಗಳಿಂದ ಅವಳ ಮೌನವ್ರತ ಭಂಗಗೊಳಿಸುವಲ್ಲಿ ಯಶಸ್ವಿಯಾಗಿದ್ದ. ಮತ್ತೆಂದೂ ಕುಸುಮಳನ್ನು ನೋಯಿಸುವ ಮಾತು ಆಡಕೂಡದು ಎಂಬ ತೀರ್ಮಾನಕ್ಕೂ ಬಂದಿದ್ದ.

ಈ ನಾನ್ಸೆನ್ಸ್ ಪ್ರಕರಣ ಆದ ಮೇಲೇ ಶಾಂತ ಕುಸುಮಳನ್ನು ಅಧಿಕೃತವಾಗಿ ಹಚ್ಚಿಕೊಂಡದ್ದು! ಎಂದಿನ ಲವಲವಿಕೆಯಿಂದ ಕುಸುಮ ಸಂದೇಶ ಕಳಿಸಿದರೆ ಶಾಂತನಂಥ ಶಾಂತನೂ ಮಲಬದ್ಧ ಮನಃಸ್ಥಿತಿಯಿಂದ ಹೊರಬಂದು ಅಕ್ಷರಸಾಲುಗಳಲ್ಲಿ ಬಿಡುಗಡೆಗೊಳ್ಳುತ್ತಿದ್ದ. ಆದರೂ ಕುಸುಮಳಿಗೆ ಆಗಾಗ ''ಕೆಸುವಿನೆಲೆ ಮೇಲಿನ ನೀರ ಹನಿಗಳಂತೆ ಜತೆಗಿದ್ದೂ ಅಂಟಿಕೊಳ್ಳಬಾರದು, ಎಲ್ಲಿ ನಂಟಿರುತ್ತೋ ಅಲ್ಲಿ ನೋವು ಗ್ಯಾರಂಟಿ'' ಎಂದೆಲ್ಲ ಎಚ್ಚರಿಸುತ್ತಿದ್ದ. ಕುಸುಮ ''ಹಗುರ ಕ್ಷಣಗಳನ್ನು ನಿಮ್ಮ ಫಿಲಾಸಫಿಯಿಂದ ಯಾಕೆ ಭಾರಗೊಳಿಸುವುದು ಮಾರಾಯ್ರೆ?'' ಎಂದು ನಗುತ್ತಿದ್ದಳು. ''ನಾನು ನೀವು ತಿಳಿದಷ್ಟು ಅಂಟು ಜಾತಿಯವಳಲ್ಲ, ಬದುಕು ನನಗೂ ಪಾಠ ಕಲಿಸಿದೆ ಕವಿಗಳೆ! ನನ್ನನ್ನು ಮೀಟ್ ಮಾಡಿದರೆ ನಿಮಗೇ ಗೊತ್ತಾಗುತ್ತೆ'' ಎಂದಿದ್ದಳು. ಮೀಟ್ ಮಾಡುವ ದಿನವೂ ಹತ್ತಿರದಲ್ಲೇ ಬಂದಿತ್ತು. ಬಾಡ ತೇರಿಗೆ ಊರಿಗೆ ಹೊರಟಿದ್ದ ಶಾಂತಾ ಕುಸುಮಳಿಗೆ ಹೇಳಿದರೆ ಖುಷಿಯಾಗ್ತಾಳೆ ಎಂದು ಅವಳಿಗೆ ಎಸ್ಸೆಮ್ಮೆಸ್ ಮಾಡಿದ್ದ: ''ಪಕ್ಷಿಗಳಿಗೆ ರೆಕ್ಕೆ ಕೊಟ್ಟ ಸ್ವಚ್ಛಂದ ಹಾರಾಟಕೆ/ಮನಸುಗಳಲಿ ಕಲ್ಪನೆ ಇಟ್ಟ ಚಲೋ ಶರಾವತಿ ತೀರಕೆ!'' ಕುಸುಮ ಖುಷಿಯಾಗಿ ''ನಿಜಕ್ಕೂ ಹೋಗ್ತಿದ್ದೀರಾ? ವ್ಹಾವ್ ಅಲ್ಲಿಯ ನೆನಪು ನನ್ನನ್ನು ತಂಪುಗೊಳಿಸುತ್ತಿದೆ. ಬರೋಕ್ಕಂತೂ ಆಗಲ್ಲ, ಕನಿಷ್ಠ ನಿಮ್ಮನ್ನು ಸ್ಟೇಶನ್ನಿನಲ್ಲಾದರೂ ಭೇಟಿ ಮಾಡಲಾ? ನಿಮ್ಮ ದರ್ಶನ ಮಾಡಬೇಕು'' ಎಂದಳು. ''ಅಯ್ಯೋ ದರ್ಶನ ಮಾಡೋಕೆ ನಾನೇನು ಶಾಂತಾನಂದ ಸ್ವಾಮಿನಾ ಅಥವಾ ನಿತ್ಯಾನಂದ ಸ್ವಾಮೀನಾ?'' ಎಂದು ನಕ್ಕಿದ್ದ. ''ನಿತ್ಯಾನಂದ ಸ್ವಾಮಿನೇ ಬೆಟರು, ಇಷ್ಟೊತ್ತಿಗೆ ದರ್ಶನ ನೀಡಿ ಪ್ರಸಾದ ನೀಡುತ್ತಿದ್ದರು, ನೀವಿದ್ದೀರಿ ನಾಲ್ಕು ತಿಂಗಳಿಂದ ಬರೀ ಎಸ್ಸೆಮ್ಮೆಸ್ಸು ಬರೆದುಕೊಂಡಿದ್ದೀರಿ. ಅಂಟಿಕೊಂಡರೆ ಕಂಟಕ ಎನ್ನೋ ಪ್ರವಚನ ಬೇರೆ ಕೇಳಬೇಕು'' ಎಂದಿದ್ದಳು. ಅದೆಷ್ಟೋ ಸ್ಮೈಲೀಗಳನ್ನು ಜೊತೆಗಂಟಿಸಿದ್ದಳು. ''ಸರಿ ಸಂಜೆ ಆರಕ್ಕೆ ಟ್ರೇನ್, ಸ್ಟೇಶನ್ನಗೆ ಬರ್ತೀರಾ?'' ಎಂದ. ಥಮ್ಸ್ ಅಪ್ ಕಳಿಸಿದಳು. ಕುಸುಮ ಬಂದೇ ಬರುವಳು ಎಂದು ಶಾಂತನಿಗೆ ಪಕ್ಕಾ ಆಗದಿದ್ದರೂ ಏನೋ ಹುರುಪು, ಉದ್ವೇಗ, ಸಣ್ಣ ಅಳುಕು ಎಲ್ಲವೂ ಕಲಸಿಕೊಂಡು ರೆಸ್ಟಲೆಸ್ ಆಗಿದ್ದ. ಅಲ್ಲಲ್ಲಿ ಕಾಣುವ ಬಿಳಿಕೂದಲುಗಳನ್ನು ಕತ್ತರಿಸಿಕೊಂಡ. ನುಣುಪಾಗಿ ಶೇವ್ ಮಾಡಿಕೊಂಡ. ಮೀಸೆಯನ್ನು ಬಾರೀಕು ಮಾಡಿದ. ಕನ್ನಡಿ ಇಪ್ಪತ್ತು ವರ್ಷಗಳ ಹಿಂದಿನ ಶಾಂತನನ್ನು ಪ್ರತಿಬಿಂಬಿಸುತ್ತಿತ್ತು. ಪೂಜಾಳ ಭೇಟಿಯ ಆ ರೋಮಾಂಚಕ ಕ್ಷಣಗಳು ನೆನಪಾದವು. ಇನ್ನೂ ಎಷ್ಟು ಹೊತ್ತು ಆ ನೆನಪಲ್ಲಿ ಮೈಮರೆತಿರುತ್ತಿದ್ದನೋ ''ಪ್ಯಾಕಿಂಗ್ ಆಯ್ತೇನ್ರೀ?'' ಎಂದು ಕುಸುಮಳ ಎಸ್ಸೆಮ್ಮೆಸ್ ಬಂದಾಗ ಎಚ್ಚೆತ್ತುಕೊಂಡ. ''ನನ್ನದೇನಿದೆ ಪ್ಯಾಕಿಂಗ್? ನೀವು ಒಪ್ಪಿದರೆ ನಿಮ್ಮನ್ನೇ ಪ್ಯಾಕ್ ಮಾಡಿ ಒಯ್ತೇನೆ ಅಷ್ಟೆ! ಶರಾವತಿ ತೀರದಲ್ಲಿ ಹಾಯಾಗಿ...'' ಎಂದ. ಅವಳು ಸ್ಮೈಲೀಗಳನ್ನು ಕಳಿಸಿದ್ದಳು. ಶಾಂತನಿಗೆ ಕುಸುಮ ಬರುವುದು ಖಾತ್ರಿಯಾಗಿತ್ತು.

★★★

ಐದಕ್ಕೆ ಬಾ ಅಂದಿದ್ದರೂ ಇವನು ನಾಲ್ಕಕ್ಕೇ ಸ್ಟೇಶನ್ ತಲುಪಿದ್ದ. ವೇಟಿಂಗ್ ರೂಮಿನಲ್ಲಿ ಆಗಾಗ ಕನ್ನಡಿಯೊಳಗೆ ಹೋಗಿಬಂದು ಸುಸ್ತಾಗಿ ಒಂದುಕಡೆ ಕೂತ. ದೂರದೂರಿನ ಟ್ರೇನುಗಳು ಬರುವುದು ಹೋಗುವುದೂ ಮಾಡುತ್ತಿದ್ದವು. ಅವು ಚಲಿಸುವಾಗ ಸರಿಯುವ ಎಲ್ಲ ಕಿಟಕಿಗಳಲ್ಲಿ